

# ಮನಿಶಾ ಮೆಚ್ಚುಗೆಯ ಮಳೆ

ನಿರ್ದೇಶಕ ಶಶಾಂಕ್ ಹಾಗೂ ಡಾರ್ಲಿಂಗ್ ಕೃಷ್ಣ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ 'ಬ್ರ್ಯಾಟ್' ಸಿನಿಮಾ ಇದೇ ಅಕ್ಟೋಬರ್ 31ಕ್ಕೆ ಬಿಡುಗಡೆಯಾಗುತ್ತಿದ್ದು, ನಟಿ ಮನಿಶಾ ಕಂದಕೂರ್ ಈ ಚಿತ್ರದ ಮೂಲಕ ಚಂದನವನಕ್ಕೆ ಅಡಿಯಿಟ್ಟಿದ್ದಾರೆ.

ತೆಲುಗಿನ 'ಭಲೆ ಉನ್ನಾದಿ' ಸಿನಿಮಾದಲ್ಲಿ ಅಭಿನಯಿಸಿದ್ದ ಮನಿಶಾ, ಪ್ರಭಾಸ್ ಅಭಿನಯದ 'ರಾಜ ಸಾಬ್' ಸಿನಿಮಾದಲ್ಲಿಯೂ ಇದ್ದಾರೆ. ಇದೀಗ ಕನ್ನಡದಲ್ಲಿನ ತಮ್ಮ ಮೊದಲ ಸಿನಿಮಾ ಹಾಗೂ ನಿರ್ದೇಶಕ ಶಶಾಂಕ್ ಅವರೊಂದಿಗೆ ಕೆಲಸ ಮಾಡಿದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

'ಪ್ರೇಮಕಥೆಗಳ ಸಿನಿಮಾಗಳಿಗೆ ಹೆಸರಾಗಿರುವ ಶಶಾಂಕ್ ಅವರ ಚಿತ್ರದಲ್ಲಿ ಅವಕಾಶ ಸಿಕ್ಕಿದ್ದು ಬಹಳ ಖುಷಿಯ ವಿಷಯ. ತಮ್ಮ ದೃಷ್ಟಿಕೋನದ ಬಗ್ಗೆ ಅವರಿಗೆ ಬಹಳ ಸ್ಪಷ್ಟತೆ ಇದೆ. ಕಥೆ ನಿರೂಪಣೆಯಲ್ಲಿ ಅವರು ಸಮತೋಲನ ಕಾಯ್ದುಕೊಳ್ಳುವ ರೀತಿ ನನ್ನನ್ನು ಬಹಳ ಸೆಳೆಯಿತು. ಸೆಟ್‌ನಲ್ಲಿ ಅವರಿಂದ ಹಲವು ವಿಷಯಗಳನ್ನು ಕಲಿತುಕೊಂಡೆ' ಎಂದಿದ್ದಾರೆ ಮನಿಶಾ. 'ನನ್ನಂಥ ಹೊಸಬರಿಗೆ ನಟ ಡಾರ್ಲಿಂಗ್ ಕೃಷ್ಣ ಅವರು ದಾರಿಯನ್ನು ಸುಲಭ ಮಾಡಿಕೊಟ್ಟರು' ಎಂದೂ ಮಾತು ಸೇರಿಸಿದ್ದಾರೆ.

''ಕೌಸಲ್ಯಾ ಸುಪ್ರಜಾ ರಾಮಾ' ಸಿನಿಮಾಗೆ ಆಡಿಷನ್ ನೀಡಿದ್ದೆ. ಆದರೆ ಸಿನಿಮಾ ಸಾಧ್ಯವಾಗಿರಲಿಲ್ಲ. ನಾನು ಶಶಾಂಕ್ ಅವರ ಸಿನಿಮಾಗಳನ್ನು ನೋಡುತ್ತಿದ್ದೆ. ಅವರು ತಮ್ಮ ಸಿನಿಮಾಗಳಲ್ಲಿ ನಟಿಯರಿಗೆ ಬಹಳ ಪ್ರಾಮುಖ್ಯ ನೀಡುತ್ತಾರೆ. 'ಬ್ರ್ಯಾಟ್' ಕೂಡ ಅದಕ್ಕೆ ಹೊರತಾಗಿಲ್ಲ. ಈ ಸಿನಿಮಾ ಹೀರೊ ಸೆಂಟ್ರಿಕ್ ಆಗಿ ಕಂಡರೂ ನನ್ನ ಪಾತ್ರ ಮುಖ್ಯ ಧಾಟಿಯಲ್ಲಿ ಸಾಗುತ್ತದೆ'' ಎಂದು ವಿವರಿಸಿದ್ದಾರೆ.

'ಬ್ರ್ಯಾಟ್' ಸಿನಿಮಾದಲ್ಲಿ ಮನಿಶಾ ಮಧ್ಯಮ ಕುಟುಂಬದ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದು, ತಮ್ಮ ಈ ಮೊದಲ ಕನ್ನಡ ಸಿನಿಮಾ ಬಗ್ಗೆ ಬಹಳ ಕುತೂಹಲ ತುಂಬಿರುವುದಾಗಿ ಹೇಳಿದ್ದಾರೆ. 'ಜನರು ಯಾವ ರೀತಿ ಪ್ರತಿಕ್ರಿಯೆ ನೀಡುತ್ತಾರೆ ಎಂಬ ಕೌತುಕ ತುಂಬಿದೆ. ಈ ಸಿನಿಮಾ ಎಲ್ಲರನ್ನೂ ಕನೆಕ್ಟ್ ಮಾಡುತ್ತದೆ. ಸಾಧ್ಯವಾದಷ್ಟು ಒಳ್ಳೆಯ ಸಿನಿಮಾಗಳನ್ನು ನನ್ನಿಂದ ಕೊಡಬೇಕು ಅಂದುಕೊಂಡಿದ್ದೇನೆ' ಎಂದು ಅಭಿವ್ಯಕ್ತಿಸಿದ್ದಾರೆ.

# 'ರಾಜ್' ಮೊಹರು

''ಜುಗಾರಿ ಕ್ರಾಸ್'– ಪ್ರಾಜೆಕ್ಟ್ ಹಲವರ ಕನಸು. ಕಳೆದ ಒಂದಷ್ಟು ವರ್ಷಗಳಲ್ಲಿ 'ಜುಗಾರಿ ಕ್ರಾಸ್' ಅನ್ನು ಹಲವರು ಸಿನಿಮಾ ಮಾಡಲು ಯೋಚಿಸಿದ್ದರು. ಈಗ ಅದು ಸಾಧ್ಯವಾಗುತ್ತಿದೆ. ಇದು ಕೇವಲ ಸಿನಿಮಾ ಅಲ್ಲ, ಕನ್ನಡ ಸಾಹಿತ್ಯದ ಒಂದು ಭಾಗ ಕೂಡ. ತೇಜಸ್ವಿ ಅವರ ಪದಗಳು ಒಂದು ಲೋಕವನ್ನೇ ಸೃಷ್ಟಿಸಿವೆ. ನಾನು ಹಲವು ವರ್ಷಗಳ ಹಿಂದೆ ಈ ಕೃತಿ ಓದಿದ್ದೆ. ಈಗ ಈ ಸಿನಿಮಾ ಭಾಗವಾಗಿರುವುದು ಸಂತೋಷ, ಅಚ್ಚರಿ ಎರಡೂ ಅನಿಸುತ್ತಿದೆ'' ಎಂದು ಖುಷಿಯಿಂದ ಮಾತನಾಡಿದ್ದಾರೆ ನಟ, ನಿರ್ದೇಶಕ ರಾಜ್ ಬಿ. ಶೆಟ್ಟಿ.



'ಜುಗಾರಿ ಕ್ರಾಸ್' ಸಿನಿಮಾ ಪೋಸ್ಟರ್

ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಜುಗಾರಿ ಕ್ರಾಸ್' ಕೃತಿಯನ್ನು 'ಅಂಬಿ ನಿಂಗ್ ವಯಸ್ಸಾಯ್ತೊ' ಸಿನಿಮಾ ಖ್ಯಾತಿಯ ನಿರ್ದೇಶಕ ಗುರುದತ್ ಗಾಣಿಗ ಅವರು ಸಿನಿಮಾ ಆಗಿ ರೂಪಿಸುತ್ತಿದ್ದು, ಈ ಸಿನಿಮಾದಲ್ಲಿ ರಾಜ್ ಕೂಡ ನಟಿಸುತ್ತಿದ್ದಾರೆ. ಈ ಸಿನಿಮಾಗೆ ಒಂದು ಸಾಹಿತ್ಯಿಕ ಗುರುತನ್ನು ನೀಡುವ ಉದ್ದೇಶವಿರುವುದಾಗಿಯೂ ಹೇಳಿದ್ದಾರೆ.

''ನನ್ನ ಜೀವನದಲ್ಲಿ ಎರಡು ಜುಗಾರಿ ಕ್ರಾಸ್‌ಗಳಿವೆ. ಮೊದಲು, ನಾನು 'ಜುಗಾರಿ ಕ್ರಾಸ್' ಪುಸ್ತಕ ಹಾಗೂ ತೇಜಸ್ವಿ ಅವರ ಅಭಿಮಾನಿ. ಎರಡನೆಯದು, ಗುರುದತ್ ಗಾಣಿಗ ಅವರೊಂದಿಗೆ ಕೆಲಸ ಮಾಡುವ ಅವಕಾಶ. ಗುರುದತ್ ಅವರು ಅದ್ಭುತ ನಿರ್ದೇಶಕ. ಇಂಥವರೊಂದಿಗೆ ಇರಬೇಕು ಎಂದು ಯಾವಾಗಲೂ ಬಯಸುತ್ತೇನೆ. ಈ ಎರಡೂ ಕಾರಣಗಳಿಂದ ಸಿನಿಮಾ ನನ್ನನ್ನು ಸೆಳೆಯಿತು'' ಎಂದಿದ್ದಾರೆ.

ಗುರುದತ್ ಗಾಣಿಗ ನಿರ್ದೇಶನದ 'ಕರಾವಳಿ' ಹಾಗೂ 'ಜುಗಾರಿ ಕ್ರಾಸ್'ನಲ್ಲಿ ರಾಜ್ ನಟಿಸುತ್ತಿದ್ದಾರೆ. ರವಿ ಸಾರಂಗ ನಿರ್ದೇಶನದ 'ರಕ್ಕಸಪುರದೋಳ್' ಸಿನಿಮಾದಲ್ಲಿಯೂ ಕಾಣಿಸಿಕೊಂಡಿದ್ದಾರೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ '45' ಸಿನಿಮಾ ಡಿ.25ರಂದು ತೆರೆಕಾಣುತ್ತಿದ್ದು, ಇದರಲ್ಲಿ ಶಿವರಾಜ್‌ಕುಮಾರ್, ಉಪೇಂದ್ರ ಜೊತೆ ರಾಜ್ ತೆರೆಹಂಚಿಕೊಂಡಿದ್ದಾರೆ.

